# ಡಾ. ಬಿ.ಆರ್. ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆ: ಒಂದು ವಿಶ್ಲೇಷಣೆ

**ಸುಚಿತ್ರಾ ಟಿ.[1] & ಗಿರಿಜಾ ಕೆ.ಎಸ್.[2]**

[1]ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಡಾ. ಜಿ ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತರ ಅಧ್ಯಯನ ಕೇಂದ್ರ, ಉಡುಪಿ.

[2]ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಯೂನಿವರ್ಸಿಟಿ ಆರ್ಟ್ಸ್ ಕಾಲೇಜು, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

DOI: https://doi.org/10.5281/zenodo.15504688

## ABSTRACT:

ಡಾ. ಬಿ.ಆರ್. ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆ (Annihilation of Caste) ಕೃತಿ ಭಾರತೀಯ ಜಾತಿ ವ್ಯವಸ್ಥೆಯ ವಿರುದ್ಧ ನೀಡಿದ ಅತ್ಯಂತ ಪ್ರಬಲ ವಿಮರ್ಶೆಗಳಲ್ಲಿ ಒಂದಾಗಿದೆ. 1936ರಲ್ಲಿ ಜಾತ್ ಪಾತ್ ತೋಡಕ್ ಮಂಡಳಿಗೆ ಈ ಭಾಷಣವನ್ನು ನೀಡಲು ಉದ್ದೇಶಿಸಲಾಗಿತ್ತಾದರೂ, ಸಂಘಟಕರು ಅದರ ವಿಷಯವನ್ನು ತೀವ್ರವಾದದ್ದು ಎಂದು ಪರಿಗಣಿಸಿ ಅದನ್ನು ನಿರಾಕರಿಸಿದರು. ನಂತರ ಅಂಬೇಡ್ಕರ್ ಅವರು ಈ ಭಾಷಣವನ್ನು ಸ್ವತಃ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಈ ಪ್ರಬಂಧದಲ್ಲಿ ಅಂಬೇಡ್ಕರ್ ಅವರ ಜಾತಿ ಸಂಬಂಧಿತ ಆಲೋಚನೆಗಳ ವಿಶ್ಲೇಷಣೆ, ಹಾಗೂ ಜಾತಿ ನಿರ್ಮೂಲನೆಗಾಗಿ ಅವರು ನೀಡಿದ ಸಂವಿಧಾನಾತ್ಮಕ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಜೊತೆಗೆ, ಈ ಕೃತಿಯ ಪ್ರಸ್ತುತತೆ ಮತ್ತು ಸಮಕಾಲೀನ ಜಾತಿ ರಾಜಕೀಯದ ಮೇಲೆ ಇದರ ಪರಿಣಾಮವನ್ನೂ ಅವಲೋಕಿಸಲಾಗುತ್ತದೆ.

## KEYWORDS:

ಜಾತಿ, ಶೋಷಣೆ, ಧರ್ಮ, ರಾಜಕೀಯ ಪ್ರತಿನಿಧಿತ್ವ, ದಲಿತರು.

ಭಾರತೀಯ ಸಮಾಜ ಶತಮಾನಗಳಿಂದ ಜಾತಿಯ ಆಧಾರದ ಮೇಲೆ ಶೋಷಿತ–ಶೋಷಕರ ನಡುವಿನ ವಿಭಜನೆಗೆ ಒಳಗಾಗಿದೆ. ಜಾತಿ ವ್ಯವಸ್ಥೆಯು ಕೇವಲ ಸಾಮಾಜಿಕ ಪರಂಪರೆ ಅಥವಾ ಧಾರ್ಮಿಕ ಸಂಪ್ರದಾಯವಲ್ಲ, ಅದು ರಾಜಕೀಯ ಮತ್ತು ಆರ್ಥಿಕ ಶೋಷಣೆಯ ಸಾಧನವಾಗಿದೆ. 20ನೇ ಶತಮಾನದಲ್ಲಿ ಅಂಬೇಡ್ಕರ್ ಅವರಂತಹ ಚಿಂತಕರು ಜಾತಿಯ ಶೋಷಣೆಯನ್ನು ಸಮೂಲವಾಗಿ ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಜಾತಿ ನಿರ್ಮೂಲನೆ ಕೃತಿಯಲ್ಲಿ ಅಂಬೇಡ್ಕರ್ ಜಾತಿ ವ್ಯವಸ್ಥೆಯ ಮೂಲಭೂತ ಸ್ವಭಾವ, ಅದರ ಧಾರ್ಮಿಕ ಆಧಾರ, ಹಾಗೂ ಅದನ್ನು ತೊಡೆದು ಹಾಕಲು ಅಗತ್ಯವಿರುವ ರಾಜಕೀಯ ಮತ್ತು ಸಾಮಾಜಿಕ ಮಾರ್ಗಗಳನ್ನು

ಚರ್ಚಿಸುತ್ತಾರೆ.

**ಭಾರತೀಯ ಜಾತಿ ವ್ಯವಸ್ಥೆಯ ಇತಿಹಾಸ:**

ಜಾತಿ ವ್ಯವಸ್ಥೆಯ ಪ್ರಾಚೀನ ಇತಿಹಾಸವನ್ನು ವೇದಗಳು, ಧರ್ಮಶಾಸ್ತ್ರಗಳು ಹಾಗೂ ಪುರಾಣಗಳು ವಿವರಿಸುತ್ತವೆ. ಮನುಸ್ಮೃತಿ, ಭಾಗವತ ಗೀತೆ ಮತ್ತು ಇತರ ಹಿಂದು ಧಾರ್ಮಿಕ ಗ್ರಂಥಗಳು ಜಾತಿಯ ಭಾವನೆಯನ್ನು ಕಾನೂನಿನ ಮಟ್ಟಕ್ಕೆ ಏರಿಸಿವೆ. ಇದರಿಂದ ಜಾತಿ ಸ್ವಭಾವತಃ, ಶೋಷಣೆ ಹಾಗೂ ಭದ್ರಪಡಿಸಿದ ಅಧಿಪತ್ಯದ ಸಾಧನವಾಗಿ ರೂಪುಗೊಂಡಿದೆ. ಅಂಬೇಡ್ಕರ್, ತಮ್ಮ ಕೃತಿಯಲ್ಲಿ, ಹಿಂದು ಧರ್ಮ ಮತ್ತು ಜಾತಿ ಪರಸ್ಪರ ಅವಿಭಾಜ್ಯವೆಂದು ವಾದಿಸುತ್ತಾರೆ.

ಈ ಲೇಖನದಲ್ಲಿ, ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆಯ ಕುರಿತು ನಡೆಸಿದ ವಿಶ್ಲೇಷಣೆಯನ್ನು ನಾಲ್ಕು ಮುಖ್ಯ ಅಂಶಗಳ ಮೂಲಕ ಪ್ರಸ್ತುತಪಡಿಸಲಾಗುತ್ತದೆ.

**1. ಜಾತಿ ನಿರ್ಮೂಲನೆ ಅಂಬೇಡ್ಕರ್ ರಿಗೆ ಯಾಕೆ ಪ್ರಮುಖವಾಯಿತು:**

**ಅಂಬೇಡ್ಕರ್ ರವರ ಮತ್ತು ವೈಯಕ್ತಿಕ ಅನುಭವಗಳು:**

ಅಂಬೇಡ್ಕರ್ ಅವರ ಬಾಲ್ಯದಿಂದಲೇ ಅಸ್ಪೃಶ್ಯತೆಯ ನೋವನ್ನು ಅನುಭವಿಸಿದರು ಶಾಲೆಯಲ್ಲಿ ಎಲ್ಲಾ ಮಕ್ಕಳ ಜೊತೆಗೆ ಕುಳಿತು ಪಾಠ ಕೇಳುವ ಅವಕಾಶ ಇದ್ದಿರಲಿಲ್ಲ. ಶಾಲಾ ದಿನಗಳಲ್ಲಿ ಕುಡಿಯುವ ನೀರು ಬೇಕಾದರೆ ಇತರ ಮಕ್ಕಳಂತೆ ತಾವೇ ನೀರು ತೆಗೆದು ಕುಡಿಯುವಂತಿರಲಿಲ್ಲ. ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ ಕಾರಣ ಶಾಲೆಯ Peon ಬಂದು ಇವರಿಗೆ ನೀರನ್ನು ಕೊಡಬೇಕಿತ್ತು. ಒಂದು ವೇಳೆ Peon ಬರದೆ ಇದ್ದರೆ ದಿನವಲ್ಲಾ ನೀರು, ಕುಡಿಯದ ಪರಿಸ್ಥಿತಿಯನ್ನು ತಮ್ಮ ಜೀವನ ಚರಿತ್ರೆ Waiting for Visa ದ ಒಂದು ಅಧ್ಯಾಯವನ್ನು ''No peon, no water'' ಎಂದು ಬರೆದಿದ್ದಾರೆ.

ಅಮೆರಿಕದ ಕೊಲಂಬಿಯಾದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆದ ಮೇಲೂ ಸರ್ಕಾರಿ ಉದ್ಯೋಗದಲ್ಲೂ ಅಸ್ಪೃಶ್ಯತೆಯ ಅಸಹ್ಯ ಬಾಂಧವ್ಯದಿಂದಾಗಿ ಮಾನಸಿಕ ಹಿಂಸೆಯನ್ನು ಅನುಭವಿಸಿದರು. ಈ ಅಸಮಾನತೆಯ ಸ್ಥಿತಿಗಳನ್ನು ಎದುರಿಸಿದ ಅಂಬೇಡ್ಕರ್, ಜಾತಿ ವ್ಯವಸ್ಥೆಯನ್ನು ಧ್ವಂಸ ಮಾಡುವ ದಿಟ್ಟ ತೀರ್ಮಾನಕ್ಕೆ ಬಂದರು. ಅವರ ಅನುಭವಗಳು ಜಾತಿಯ ನಿರ್ಮೂಲನೆ ಅಗತ್ಯವೆಂಬ ನಂಬಿಕೆಯನ್ನು ಹುಟ್ಟುಹಾಕಿದವು.

**2. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಜಾತಿಯ ತಾತ್ವಿಕ ವಿಶ್ಲೇಷಣೆ:**

1916ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ Castes in In-

dia : Their Mechanism, Genesis and Development ಎಂಬ ಲೇಖನದಲ್ಲಿ ಅಂಬೇಡ್ಕರ್ ರವರು ಜಾತಿಯ ತಾತ್ವಿಕ ವಿಶ್ಲೇಷಣೆ ನಡೆಸಿದರು: ಇದು ಜಾತಿ ವ್ಯವಸ್ಥೆಯ ಕುರಿತು ಬಹುಮಟ್ಟಿಗೆ ತತ್ತ್ವಶಾಸ್ತ್ರೀಯವಾಗಿ ಬರೆದ ಮೊದಲ ದಶಕದ ಗಂಭೀರ ಅಧ್ಯಯನವೆಂದು ಪರಿಗಣಿಸಲಾಗುತ್ತದೆ. ಅಂಬೇಡ್ಕರ್ ಅವರು ಜಾತಿಯ ಬಗ್ಗೆ ಅದು ಉಂಟುಮಾಡುವ ಪರಿಣಾಮದ ಬಗ್ಗೆ ಹೀಗೆ ಹೇಳುತ್ತಾರೆ “The caste problem is a vast one,. Practically, it is an institution that portends tremendous consequences. It is a local problem, but capable of much wider mischief, for as long as caste in India does exist, Hindus will hardly intermarry or have any social intercourse with outsiders; and if Hindus migrate to other regions on earth, Indian caste would become a world problem.”

ಅಂಬೇಡ್ಕರ್ ಅವರ ಪ್ರಕಾರ: ಜಾತಿ ವ್ಯವಸ್ಥೆಯ ಮೂಲ “ಎಂಡೋಗಮಿ” (Endogamy) ಎಂಬ ವೈವಾಹಿಕ ನಿಯಮದಲ್ಲಿ ನೆಲಸಿದೆ. ಜಾತಿಯು ವೈಜ್ಞಾನಿಕ ಅಥವಾ ಧಾರ್ಮಿಕ ಶ್ರೇಷ್ಠತೆಯಿಂದ ಸೃಷ್ಟಿಯಾಗಿಲ್ಲ; ಅದು ಮಾನವನ ನಿರ್ಮಿತಿಯ ಪ್ರತಿಫಲವಾಗಿದೆ. ಜಾತಿ ವ್ಯವಸ್ಥೆಯು ಸಮಾಜದ ಶ್ರೇಣೀಕರಣ ಮತ್ತು ಶೋಷಣೆಯ ಸೂಕ್ಷ್ಮ ವಿಧಾನವಾಗಿದೆ.

ಈ ಪ್ರಬಂಧವು ಅಂಬೇಡ್ಕರ್ ಅವರ ನಂತರದ ಎಲ್ಲಾ ಬರಹಗಳ ತಾತ್ವಿಕ ಹಿನ್ನಲೆಯನ್ನು ಒದಗಿಸಿತು.

**3. Poona Pact ಸಂದರ್ಭದಲ್ಲಿ ಗಾಂಧಿ–ಅಂಬೇಡ್ಕರ್ ಮಾತುಕತೆ:**

ಪೂನ ಪ್ಯಾಕ್ಟ್ ನ ಸಂದರ್ಭದಲ್ಲಿ ಗಾಂಧಿಜಿಯವರು ಅಂಬೇಡ್ಕರ್ ರವರನ್ನು ಕರೆಸಿ ಮಾತೃಭೂಮಿಗಾಗಿ ಪ್ರತ್ಯೇಕ ಮತಕ್ಷೇತ್ರ ಕೇಳದಂತೆ ಕೇಳಿಕೊಂಡಾಗ “ನನಗೆ ಮಾತೃಭೂಮಿ ಇಲ್ಲ, ಈ still don’t have Homeland ನಿಮ್ಮ ಜನಗಳು ಪ್ರಾಣಿಗಳಿಗಿಂತ ಕಡೆಯಾಗಿ ನನ್ನೊಂದಿಗೆ ವ್ಯವಹರಿಸುತ್ತೀರಿ ಎನ್ನುತ್ತಾರೆ. ಅಂಬೇಡ್ಕರ್ ರವರ ಪ್ರಕಾರ ನಿಜವಾದ ಸ್ವತಂತ್ರ ಬೇಕಾಗಿರುವುದು ಅಸ್ಪೃಶ್ಯರಿಗೆ ಮಾತ್ರ ಉಳಿದವರು ಹೋರಾಟ ಮಾಡುವುದು ಅದಕಿಂತ ಹೆಚ್ಚಿನದನ್ನು ಪಡೆಯುದಕ್ಕೆ ಆಗಿದೆ.

**4. Annihilation of Caste – ಜಾತಿ ವ್ಯವಸ್ಥೆಯ ವಿರುದ್ಧ ಅಂಬೇಡ್ಕರ್ ಅವರ ತೀರ್ಮಾನ:**

**ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆ ಕೃತಿಯ ಮುಖ್ಯ ತತ್ತ್ವಗಳು:**

**1. ಜಾತಿಯ ಧಾರ್ಮಿಕ ಮೂಲಭೂತತ್ವ:** ಅಂಬೇಡ್ಕರ್ ಪ್ರಕಾರ, ಜಾತಿ ವ್ಯವಸ್ಥೆ ಕೇವಲ

ಸಾಮಾಜಿಕ ವ್ಯವಸ್ಥೆಯಲ್ಲ, ಅದು ಹಿಂದೂ ಧರ್ಮದಲ್ಲಿ ಬೇರು ಬಿಟ್ಟಿದೆ. ಮನುಸ್ಮೃತಿ, ಧರ್ಮಶಾಸ್ತ್ರಗಳು, ಪುರಾಣಗಳು ಇತ್ಯಾದಿ ಗ್ರಂಥಗಳಲ್ಲಿ ಜಾತಿಯ ಭಿನ್ನತೆ, ಶುದ್ಧಿ–ಅಶುದ್ಧಿ, ಶಾಸ್ತ್ರಬದ್ಧಗೊಳಿಸಿವೆ. ಉದಾಹರಣೆಗೆ, ಬ್ರಾಹ್ಮಣರು ವಿದ್ಯಾಭ್ಯಾಸ, ಯಜ್ಞ, ದಾನ ಸ್ವೀಕಾರ ಮುಂತಾದ ಕಾರ್ಯಗಳಿಗೆ ಅನುವು ಪಡೆದರೆ, ಶೂದ್ರರು ಸೇವೆಯ ಕೆಲಸಗಳಿಗೆ ಮಾತ್ರ ನಿರ್ದಿಷ್ಟಗೊಳಿಸಲ್ಪಟ್ಟರು. ಹೀಗಾಗಿ ಧರ್ಮವೇ ಜಾತಿಯ ಸ್ಥಿರತೆಗೆ ಪೋಷಕವಾಗಿರುವುದರಿಂದ, ಈ ವ್ಯವಸ್ಥೆಯನ್ನು ಧರ್ಮದಿಂದಲೇ ಪ್ರಶ್ನಿಸಬೇಕು ಎಂದು ಅವರು ಒತ್ತಿ ಹೇಳಿದರು.

**2. ಜಾತಿ ಮತ್ತು ಆರ್ಥಿಕ ಶೋಷಣೆ:** ಜಾತಿ ವ್ಯವಸ್ಥೆ ಶೋಷಿತ ವರ್ಗಗಳ ಮೇಲೆ ಕೇವಲ ಮಾನಸಿಕ ಅಥವಾ ಸಾಮಾಜಿಕ ಶೋಷಣೆಯಲ್ಲ, ಆರ್ಥಿಕ ಶೋಷಣೆಯೂ ಆಗಿದೆ ಎಂದು ಅಂಬೇಡ್ಕರ್ ತೀವ್ರವಾಗಿ ವಾದಿಸುತ್ತಾರೆ. ದಲಿತರು ಮತ್ತು ಇತರ ಹಿಂದುಳಿದ ವರ್ಗಗಳು ಶತಮಾನಗಳಿಂದ ಶ್ರಮಜೀವಿಗಳಾಗಿದ್ದು, ಅವರಿಗೆ ಭೂಮಿ, ಸಂಪತ್ತು, ಶಿಕ್ಷಣ, ಉದ್ಯೋಗಗಳಲ್ಲಿ ಅವಕಾಶಗಳಿಲ್ಲದೇ ಉಳಿದರು. ಜಾತಿಯ ಆಧಾರದ ಮೇಲೆ ಬೆಳೆದು ಬಂದ ಹಳೆ ವ್ಯವಸ್ಥೆ ಈ ವರ್ಗಗಳನ್ನು ಶ್ರಮಜೀವಿಗಳಾಗಿ ಮಾತ್ರ ಉಳಿಸಿಕೊಂಡಿತು. ಇದರಿಂದಾಗಿ, ಶೋಷಣೆಯು ಧಾರ್ಮಿಕವಾಗಿ ಹಾಗೂ ಆರ್ಥಿಕವಾಗಿ ಬಲವಾಗಿ ನೆಲೆಗೊಂಡಿತು.

**3. ಜಾತಿಯ ನಿರ್ಮೂಲನೆಗೆ ರಾಜಕೀಯ ಮತ್ತು ಸಾಮಾಜಿಕ ಕ್ರಾಂತಿ ಅವಶ್ಯಕ:** ಅಂಬೇಡ್ಕರ್ ಪ್ರಕಾರ, ಜಾತಿಯ ನಿರ್ಮೂಲನೆಗೆ ಕೇವಲ ಧರ್ಮದ ಸುಧಾರಣೆ ಸಾಕಾಗದು. ಸಮಾನತೆಗೆ ಆಧಾರವಾದ ಹೊಸ ರಾಜಕೀಯ ವ್ಯವಸ್ಥೆ ಹಾಗೂ ಶೋಷಿತರ ರಾಜಕೀಯ ಪ್ರತಿನಿಧಿತ್ವ ಬಹುಮುಖ್ಯವಾಗಿದೆ. ಶೋಷಿತರಿಗೆ ಶಿಕ್ಷಣ, ಸಂಘಟನೆ ಹಾಗೂ ತಮ್ಮ ಹಕ್ಕುಗಳ ಅರಿವು ಅತ್ಯಂತ ಅಗತ್ಯ. ಜಾತಿಯ ನಿರ್ಮೂಲನೆ ಎಂದರೆ ಶೋಷಿತ ವರ್ಗದ ಸಶಕ್ತೀಕರಣ, ಸ್ವಯಂ ಶಕ್ತೀಕರಣ ಮತ್ತು ಹೊಸ ಸಮಾನತೆಯ ಆಧಾರಿತ ಸಮಾಜ ನಿರ್ಮಾಣ. ಅಂಬೇಡ್ಕರ್ ಅವರು ಜಾತಿಯ ನಿರ್ಮೂಲನೆಗೆ ಸಾಮಾಜಿಕ ಕ್ರಾಂತಿ ಬಗ್ಗೆ "Those who want to change must change the social order." ಎಂದು ಹೇಳಿದ್ದಾರೆ:

**ಅಂಬೇಡ್ಕರ್ ಅವರ ಜಾತಿ ಮತ್ತು ಹಿಂದೂಧರ್ಮದ ವಿಮರ್ಶೆ**

ಅಂಬೇಡ್ಕರ್ ಅವರ ಪ್ರಕಾರ, ಜಾತಿ ವ್ಯವಸ್ಥೆ ಕೇವಲ ಸಾಮಾಜಿಕ ಅಭ್ಯಾಸವಲ್ಲ, ಅದು ಧಾರ್ಮಿಕ ಪಠ್ಯಗಳಲ್ಲಿ ಅಡಗಿರುವ ಮತ್ತು ಐತಿಹಾಸಿಕವಾಗಿ ಪ್ರತಿಷ್ಠಾಪಿತವಾದ ಅಸಮಾನತೆಯ ವ್ಯವಸ್ಥೆಯಾಗಿದೆ. ಅವರ ಮುಖ್ಯ ವಾದಗಳು ಹೀಗಿವೆ:

**1. ಜಾತಿ ಧಾರ್ಮಿಕ ಸ್ವರೂಪವನ್ನು ಹೊಂದಿದೆ:** ಪಾಶ್ಚಾತ್ಯ ಸಮಾಜಗಳಲ್ಲಿ ಅಸಮಾನತೆ ಆರ್ಥಿಕ ಅಥವಾ ರಾಜಕೀಯ ಕಾರ್ಮಿಕ ವಿಭಾಗಗಳ ಮೂಲಕ ಕಂಡುಬರುವುದಾದರೆ,

ಭಾರತದಲ್ಲಿ ಅದು ಧಾರ್ಮಿಕ ನೆಲೆಯಲ್ಲಿ ಆಧಾರಿತವಾಗಿದೆ.

ಜಾತಿ ವ್ಯವಸ್ಥೆಯು ಮನುಸ್ಮೃತಿಯಂತಹ ಹಿಂದೂ ಶಾಸ್ತ್ರಗಳ ಮೂಲಕ ಮಾನ್ಯತೆ ಪಡೆದುಕೊಂಡಿದೆ.

ಅಂಬೇಡ್ಕರ್ ಹಿಂದೂ ಧರ್ಮವನ್ನು ತೀವ್ರವಾಗಿ ಟೀಕಿಸಿದರು, ಏಕೆಂದರೆ ಅದು ಜಾತಿ ಶ್ರೇಣೀಕರಣವನ್ನು ಶಾಶ್ವತಗೊಳಿಸುತ್ತದೆ.

**2. ಬ್ರಾಹ್ಮಣ್ಯ ಮತ್ತು ಶ್ರೇಣಿವ್ಯವಸ್ಥೆ:** ಅಂಬೇಡ್ಕರ್ ಅವರ ಪ್ರಕಾರ, ಬ್ರಾಹ್ಮಣ್ಯವು ಕೇವಲ ಬ್ರಾಹ್ಮಣರಿಗೆ ಸೀಮಿತವಲ್ಲ, ಆದರೆ ಅದು ಜಾತಿ ಪರಂಪರೆಯನ್ನು ಬಲಪಡಿಸುವ ಭಾವನಾತ್ಮಕ ಮತ್ತು ಚಿಂತನೆಗೆ ಸಂಬಂಧಿಸಿದ ವ್ಯವಸ್ಥೆಯಾಗಿದೆ.

ಜಾತಿ ಶ್ರೇಣಿವ್ಯವಸ್ಥೆಯು ಶೋಷಿತ ವರ್ಗಗಳಿಗಿಂತ ಉನ್ನತ ವರ್ಗದವರಿಗೂ ಶ್ರಮನಿಷ್ಠಾ ಮತ್ತು ಶ್ರೇಣಿಕೃತ ಅಸಮಾನತೆಯನ್ನು ಖಚಿತಗೊಳಿಸುತ್ತದೆ.

**3. ಸಮಾಜ ಸುಧಾರಣಾ ಚಳವಳಿಗಳ ವೈಫಲ್ಯ:** ಅಂಬೇಡ್ಕರ್ ಹಿಂದೂ ಧರ್ಮದ ಒಳಗಿನ ಸುಧಾರಣಾ ಪ್ರಯತ್ನಗಳನ್ನು ಅಪರ್ಯಾಯಗೊಳಿಸಿದರು, ಏಕೆಂದರೆ ಅವು ಜಾತಿ ವ್ಯವಸ್ಥೆಯ ಮೂಲವನ್ನು ಪ್ರಶ್ನಿಸುತ್ತಿರಲಿಲ್ಲ.

**ಜಾತಿ ನಿರ್ಮೂಲನೆಗಾಗಿ ಅಂಬೇಡ್ಕರ್ ಅವರ ಪರಿಹಾರಗಳು:**

ಅಂಬೇಡ್ಕರ್ ಕೇವಲ ಜಾತಿ ವ್ಯವಸ್ಥೆಯ ದೋಷಗಳನ್ನು ಮಾತ್ರ ವಿಶ್ಲೇಷಿಸಲಿಲ್ಲ, ಅವರು ಸ್ಪಷ್ಟ ಪರಿಹಾರಗಳನ್ನೂ ನೀಡಿದರು:

**1. ಅಂತರ್ಜಾತಿ ವಿವಾಹ:**

ಅಂಬೇಡ್ಕರ್ ಪ್ರಕಾರ, ಜಾತಿ ಶ್ರೇಣೀಕರಣವು ಎಂಡೋಗಮಿ (ಒಳ ಜಾತಿಯವರ ನಡುವೆ ಮಾತ್ರ ವಿವಾಹ) ಮೂಲಕ ಉಳಿದಿದೆ.ಜಾತಿ ನಿರ್ಮೂಲನೆಗೆ ಮಿಶ್ರ ವಿವಾಹಗಳು ಮುಖ್ಯ ಹಂತ ಎಂದು ಅವರು ಒತ್ತಿಹೇಳಿದರು.

**2. ಶಿಕ್ಷಣ ಮತ್ತು ಜಾಗೃತಿಯ ಮಹತ್ವ:**

ಶೋಷಿತ ವರ್ಗಗಳಿಗೆ ಶಿಕ್ಷಣ ದೊರೆಯುವುದು ಅವರ ಸ್ವಾತಂತ್ರ್ಯಕ್ಕೆ ಮೊದಲ ಹೆಜ್ಜೆ. ಜಾತಿ ವ್ಯವಸ್ಥೆಯ ದುಷ್ಪರಿಣಾಮಗಳ ಬಗ್ಗೆ ಸಮಗ್ರ ಅರಿವು ಮೂಡಿಸುವ ಅಗತ್ಯವಿದೆ.

**3. ಧಾರ್ಮಿಕ ಪರಿವರ್ತನೆ:**

ಅಂಬೇಡ್ಕರ್ ಪ್ರಕಾರ, ಜಾತಿ ನಿರ್ಮೂಲನೆಗೆ ಹಿಂದೂ ಧರ್ಮದಿಂದ ಮುಕ್ತಗೊಳ್ಳುವುದು ಅನಿವಾರ್ಯ.ಅವರು ಬೌದ್ಧಧರ್ಮವನ್ನು ದಲಿತರ ಸಮಾನತೆಯ

ಧರ್ಮವೆಂದು ಪರಿಗಣಿಸಿದರು.

**4. ರಾಜಕೀಯ ಪ್ರತಿನಿಧಿತ್ವ ಮತ್ತು ಕಾನೂನು ಹಕ್ಕುಗಳು:**

ದಲಿತರು ರಾಜಕೀಯವಾಗಿ ಅಧಿಕಾರಶಾಲಿಗಳಾಗದೆ ಇದ್ದರೆ, ಅವರ ಮೇಲೆ ನಡೆಯುವ ಶೋಷಣೆ ಮುಂದುವರೆಯುತ್ತದೆ. ಹೀಗಾಗಿ, ರಾಜಕೀಯ ಪ್ರತಿನಿಧಿತ್ವ ಮತ್ತು ಸಂವಿಧಾನಾತ್ಮಕ ಹಕ್ಕುಗಳು ಮಹತ್ವದ್ದು ಎಂದು ಹೇಳುತ್ತಾರೆ.

**ಉಪಸಂಹಾರ:**

ಅಂಬೇಡ್ಕರ್ ಅವರ Annihilation of Caste ಕೃತಿ, ಭಾರತೀಯ ಸಮಾಜದ ಅತಿದೊಡ್ಡ ಸಾಮಾಜಿಕ ಅನ್ಯಾಯವಾದ ಜಾತಿ ವ್ಯವಸ್ಥೆಯ ವಿರುದ್ಧದ ಧೈರ್ಯಮಯ ಘೋಷಣೆಯಾಗಿದೆ.. ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆ ಕೃತಿ ಕೇವಲ ಒಂದು ತತ್ತ್ವಶಾಸ್ತ್ರೀಯ ವಾದವಲ್ಲ, ಅದು ಭಾರತದ ಸಾಮಾಜಿಕ–ರಾಜಕೀಯ ಪರಿವರ್ತನೆಯ ದಿಕ್ಕನ್ನು ನಿರ್ಧರಿಸಿದ ಮಹತ್ವದ ಆಲೋಚನೆ. ನಮ್ಮ ದೇಶದಲ್ಲಿ ಕಾನೂನುಗಳು ಜಾತಿ ಅಸಮಾನತೆಯನ್ನು ನಿಷೇಧಿಸಿದರೂ, ಜಾತಿ ವ್ಯವಸ್ಥೆಯ ಮೂಲಭೂತ ನಿರ್ಮೂಲನೆ ಇನ್ನೂ ಸಾಧನೆಯ ಹಂತದಲ್ಲಿದೆ. ಅಂಬೇಡ್ಕರ್ ಅವರು ಬಯಸಿದ ಸಮಾನತೆಯ ಸಮಾಜವನ್ನು ನಿರ್ಮಿಸಲು ಕೇವಲ ಕಾನೂನು ಸಾಕಾಗದು; ಮಾನಸಿಕ ಮತ್ತು ಸಾಮಾಜಿಕ ಪರಿವರ್ತನೆಯ ಅಗತ್ಯವಿದೆ. ಈ ಲೇಖನ ನಿಷ್ಕರ್ಷಿಸುತ್ತಿರುವುದು ಅಂದರೆ, ಅಂಬೇಡ್ಕರ್ ಅವರ ಜಾತಿ ನಿರ್ಮೂಲನೆ ಕೃತಿ ಇಂದಿಗೂ ಪಾಠವಾಗಿದೆ, ಅದು ಜಾತಿ ವಿರೋಧಿ ಚಳವಳಿಗಳಿಗೆ ಪ್ರೇರಣೆಯಾಗುತ್ತದೆ ಮತ್ತು ಪ್ರಜಾಸತ್ತಾತ್ಮಕ ಭಾರತ ನಿರ್ಮಾಣದ ಕನಸಿಗೆ ದಾರಿ ತೋರುತ್ತದೆ.ಜಾತಿ ನಿರ್ಮೂಲನೆ ಕೃತಿ ಭಾರತದ ಸಾಮಾಜಿಕ ಕ್ರಾಂತಿಗಳಲ್ಲಿ ಮಹತ್ವದ ಪಾತ್ರ ವಹಿಸಿದೆ. ಅಂಬೇಡ್ಕರ್ ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಕಾನೂನುಗಳು ಜಾತಿ ಅಸಮಾನತೆಯನ್ನು ನಿಷೇಧಿಸಿದರೂ, ಜಾತಿಯ ಪೂರ್ಣ ನಿರ್ಮೂಲನೆ ಇನ್ನೂ ಸಾಧಿಸಬೇಕಾದ ಕಾರ್ಯವಾಗಿದೆ.

## References:


1. Ambedkar, B. R. (1936). Annihilation of Caste. Jullundur: The Hindu Printing Works.
2. Ambedkar, B. R. (1916). Castes in India: Their mechanism, genesis and development. (Paper presented at Columbia University). Reprinted in Rodrigues, V. (Ed.), The essential writings of B. R. Ambedkar (2002). New Delhi: Oxford University Press.
3. Rodrigues, V. (Ed.). (2002). The essential writings of B. R. Ambedkar. New Delhi: Oxford University Press.
4. Keer, D. (1990). Dr. Ambedkar: Life and mission. Mumbai: Popular Prakashan.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.